# ಕನ್ನಡ ಅಭಿವೃದ್ಧಿ ಪ್ರಾಧಿಕಾರ

## ಕನ್ನಡ ಅಭಿವೃದ್ಧಿ ಪ್ರಾಧಿಕಾರವು ೨೦೦೯-೧೦ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಯೋಜಿಸಿರುವ ಕ್ರಿಯಾ ಯೋಜನೆಗಳು ಮತ್ತು ಅಂದಾಜು ಆಯವ್ಯಯ

**ಕ್ರಿಯಾ ಯೋಜನೆ** (ಯೋಜನೆ ಶೀರ್ಷಿಕೆ-೨೨೦೫-೦೦-೧೦೨-೧೮೧)

| ಕ್ರ. ಸಂ | ಯೋಜನಾ ಕಾರ್ಯಕ್ರಮಗಳ ಹೆಸರು | ಒದಗಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| ೧ | **೧೮ ಗಡಿ ಜಿಲ್ಲೆ ಹಾಗೂ ೩೬ ತಾಲ್ಲೂಕುಗಳಲ್ಲಿ ಕನ್ನಡ ನುಡಿ ಉತ್ಸವ/ಕನ್ನಡ ನುಡಿ ಹಬ್ಬ**: ಈ ಕಾರ್ಯಕ್ರಮವನ್ನು ರಾಜ್ಯದ ಮತಕ್ಷೇತ್ರಗಳಲ್ಲಿ ಕನ್ನಡ ಸಾಹಿತ್ಯೋತ್ಸವ, ರಂಗೋತ್ಸವ ಮತ್ತು ನೃತ್ಯೋತ್ಸವ, ಕನ್ನಡ-ಕನ್ನಡಿಗರ ಕಲಾ ಪ್ರದರ್ಶನ, ವಿಚಾರ ಸಂಕಿರಣ, ಕವಿಗೋಷ್ಠಿ, ಸಾಂಸ್ಕೃತಿಕ ಕಮ್ಮಟ, ಕನ್ನಡೇತರರಿಗೆ ಕನ್ನಡ ಭಾಷೆ, ಪರಂಪರೆಯ ಬಗ್ಗೆ ಅರಿವು ಮತ್ತು ಸ್ವಾಭಿಮಾನ ಮೂಡಿಸುವುದು - ೯ ತಿಂಗಳಲ್ಲಿ ೧೮ ಜಿಲ್ಲೆ ಥ ರೂ.೧೦ ಲಕ್ಷ ಮತ್ತು ೩೬ ತಾಲ್ಲೂಕು ಥ ರೂ.೫ ಲಕ್ಷ (ಪ್ರತಿ ತಿಂಗಳು ೨ ಜಿಲ್ಲೆ ಮತ್ತು ೪ ತಾಲ್ಲೂಕುಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು) | ೩೬೦.೦೦ |
| ೨ | ಕರ್ನಾಟಕ ಸಂಗಾತಿ, ಆಡಳಿತದಲ್ಲಿ ಕನ್ನಡ, ಸರೋಜಿನಿ ಮಹಿಷಿ ವರದಿ/ಅನುಷ್ಠಾನದ ಆದೇಶ/ಶಿಫಾರಸ್ಸುಗಳ ಸಂಕ್ಷಿಪ್ತ ಕೈಪಿಡಿ ಹಾಗೂ ಕ.ಅ.ಪ್ರಾ ದಿಂದ ಪ್ರಕಟಿಸಿರುವ ಎಲ್ಲಾ ಪುಸ್ತಕಗಳ ಮರುಮುದ್ರಣ ಹಾಗೂ ಹೊಸ ಪುಸ್ತಕಗಳ ಮುದ್ರಣ ವೆಚ್ಚ | ೩೦.೦೦ |
| ೩ | ಕಾನೂನು ತಜ್ಞರು/ಭಾಷಾ ತಜ್ಞರು/ಶಿಕ್ಷಣ ತಜ್ಞರು/ವಿಷಯ ತಜ್ಞರು/ ಸಂಘಟನಕಾರರು/ಸಾಂಸ್ಕೃತಿಕ ನಿರ್ವಾಹಕರು ಇವರ ಸೇವೆಯನ್ನು ಪ್ರಾಧಿಕಾರದ ಕಾರ್ಯಾಲಯಗಳಲ್ಲಿ ಬಳಸಿ ಕೊಳ್ಳಲು ಬೇಕಾಗುವ ಸಂಭಾವನೆ/ಭತ್ಯೆ (ಪ್ರಯಾಣ ಮತ್ತು ದಿನಭತ್ಯೆ) ಯನ್ನು ನೀಡುವ ಸಂಬಂಧ ವೆಚ್ಚ. | ೨೦.೦೦ |
| ೪ | **ನ್ಯಾಯಾಂಗದಲ್ಲಿ ಕನ್ನಡ**: ಕನ್ನಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೀರ್ಪು ನೀಡಿದ ನ್ಯಾಯಾಧೀಶರಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸುವ ಕಾರ್ಯಕ್ರಮ | ೧೦.೦೦ |
| ೫ | ರಾಜ್ಯದಲ್ಲಿ ವಿಭಾಗ ಮಟ್ಟದ ಕನ್ನಡ ಮಾಧ್ಯಮ ಪ್ರಶಸ್ತಿ ಸಮಾರಂಭಕ್ಕೆ ಪ್ರತಿ ತಾಲ್ಲೂಕಿನಿಂದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ತಲಾ ೩ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡುವ ಕಾರ್ಯಕ್ರಮ (ಅಗತ್ಯವಿದ್ದಲ್ಲಿ ಆಯುಕ್ತರು, ಸಾ.ಶಿ.ಇ ಇವರ ಸಹಕಾರದೊಂದಿಗೆ) ಮತ್ತು ಸಾಧ್ಯವಾದಲ್ಲಿ ಹೊರರಾಜ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ/ಪಿ.ಯು.ಸಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ | ೯೦.೦೦ |
| ೬ | ರಾಜ್ಯದಲ್ಲಿನ ಖಾಸಗಿ ಕಾರ್ಖಾನೆಗಳಲ್ಲಿ (ಸಾರ್ವಜನಿಕ ಉದ್ದಿಮೆ/ಖಾಸಗಿ ವಲಯ) ಕಾರ್ಯನಿರ್ವಹಿಸುತ್ತಿರುವ ಕನ್ನಡೇತರ ನೌಕರರುಗಳಿಗೆ ಕನ್ನಡ ಕಲಿಸುವ ಉದ್ದೇಶದಿಂದ ಕನ್ನಡ ಕಲಿಕಾ ಕೇಂದ್ರಗಳು/ಸಮಾವೇಶ/ ಕಾರ್ಯಕ್ರಮಗಳನ್ನು ಆಯೋಜಿಸುವ ವೆಚ್ಚ/ಕಾರ್ಯಕ್ರಮಗಳಿಗೆ ಅನುದಾನ ನೀಡಿಕೆ | ೨೫.೦೦ |

| | | |
|---|---|---|
| ೮ | ಹೊರರಾಜ್ಯಗಳ ಪ್ರತಿ ವಿಶ್ವವಿದ್ಯಾಲಯಗಳಲ್ಲಿ ಕನ್ನಡದಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿರುವ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಆರು ವಿದ್ಯಾರ್ಥಿಗಳಿಗೆ ತಲಾ ಮಾಸಿಕ ರೂ.೨೦೦೦/- ದಂತೆ **"ವಿದ್ಯಾರ್ಥಿ ವೇತನ"**. | ೧೦.೦೦ |
| ೯ | ಹೊರರಾಜ್ಯದ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್/ಪಿ.ಹೆಚ್.ಡಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಅಂಗೀಕೃತಗೊಂಡ ಪ್ರಬಂಧಗಳ ಪ್ರಕಟಣೆಗಾಗಿ ವೆಚ್ಚ | ೫.೦೦ |
| ೧೦ | **ಕನ್ನಡ ಶಕ್ತಿ ಭವನ**/ಕನ್ನಡ ಭವನ/ಕನ್ನಡ ಸಾಂಸ್ಕೃತಿಕ ಭವನ/ಕನ್ನಡ ಗಡಿಭವನ ನಿರ್ಮಾಣಕ್ಕೆ ಅನುದಾನ ಹಂಚಿಕೆ (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಅನುದಾನ ಹಂಚಿಕೆ) | ೫೦.೦೦ |
| | **ಒಟ್ಟು** | **೬೦೦.೦೦** |

ಕಾರ್ಯದರ್ಶಿ,
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಅಧ್ಯಕ್ಷರು,
ಕನ್ನಡ ಅಭಿವೃದ್ಧಿ ಪ್ರಾಧಿಕಾರ

# ಕನ್ನಡ ಅಭಿವೃದ್ಧಿ ಪ್ರಾಧಿಕಾರ

## ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ ೨೦೦೮-೦೯ನೇ ಸಾಲಿನಲ್ಲಿ ಬಾಕಿ ಉಳಿದ ಮೊತ್ತ ರೂ.೩೭೫.೦೦ ಗಳಿಗೆ ೨೦೦೯-೧೦ನೇ ಸಾಲಿನಲ್ಲಿ ಉದ್ದೇಶಿಸಿದ ಮುಂದುವರೆದ ಕ್ರಿಯಾ ಯೋಜನೆಯ ಕಾರ್ಯಕ್ರಮಗಳ ವಿವರ ಮತ್ತು ಪರಿಷ್ಕೃತ ಅಂದಾಜು ಆಯವ್ಯಯ ಕರಡು ಪಟ್ಟಿ

**ಕ್ರಿಯಾ ಯೋಜನೆ** (ಯೋಜನೆ ಶೀರ್ಷಿಕೆ-೨೨೦೫-೦೦-೧೦೨-೧೮೧)

| ಕ್ರ. ಸಂ | ಯೋಜನೆ ಕಾರ್ಯಕ್ರಮಗಳ ಹೆಸರು | ಮೀಸಲಿಟ್ಟಿರುವ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ೧ | ೨೦೦೯-೧೦ನೇ ಸಾಲಿನ ಪ್ರಾಧಿಕಾರದ ಯೋಜನಾ ಕಾರ್ಯಕ್ರಮ ಗಳನ್ನು ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗ ಹಾಗೂ ಜಿಲ್ಲಾ ವಾರ್ತಾ ಇಲಾಖೆಯ ಸಹಯೋಗದೊಡನೆ ಕಾರ್ಯಕ್ರಮಗಳಿಗಾಗಿ ಅನುದಾನ. | ೨೦.೦೦ |
| ೨ | ಅ. ಹೊರರಾಜ್ಯಗಳಲ್ಲಿ ಕನ್ನಡಿಗರ ಸಮಾವೇಶ- ಕನ್ನಡ ನಾಡುನುಡಿ ಉತ್ಸವ/ಸಮಾವೇಶ (ದೆಹಲಿ ಸೇರಿದಂತೆ)<br>ಆ. ನವದೆಹಲಿಯಲ್ಲಿ ರಾಜ್ಯದ ಸಂಸದರು/ ರಾಜ್ಯಸಭಾ ಸದಸ್ಯರಗಳೊಡನೆ ಕನ್ನಡ ಅನುಷ್ಠಾನದ ಬಗ್ಗೆ ಚರ್ಚೆ ಮತ್ತು ಸಂವಾದ<br>} ರೂ.೧೫.೦೦ ಲಕ್ಷ | ೧೫.೦೦ |
| ೩ | ೫ ನೆರೆರಾಜ್ಯಗಳ ಗಡಿ ಭಾಗಗಳಲ್ಲಿ ರಾಜ್ಯಮಟ್ಟದ ಗಡಿ ಕನ್ನಡಿಗರ ಸಮಾವೇಶ ಮತ್ತು ಗಡಿ ಭಾಗಗಳ ಕನ್ನಡ ಶಾಲೆಗಳು/ ಸಂಘಸಂಸ್ಥೆಗಳ ಅಭಿವೃದ್ಧಿಗೆ ಸಹಾಯ | ೩೦.೦೦ |
| ೪ | **ಹೊರದೇಶಗಳಲ್ಲಿನ ಅನಿವಾಸಿ ಕನ್ನಡಿಗರ ಜಾಗೃತಿ ಸಮಾವೇಶ** ಅನಿವಾಸಿ ಕನ್ನಡಿಗರ ಕನ್ನಡ ಸಂಘಸಂಸ್ಥೆಗಳ ಕನ್ನಡ ಜಾಗೃತಿ ಸಮಾವೇಶದಲ್ಲಿ ಸಾಂಸ್ಕೃತಿಕ ಸಂವಾದ ಹಾಗೂ ವಿನಿಮಯ ಕಾರ್ಯಕ್ರಮಕ್ಕೆ ಪ್ರಾಧಿಕಾರದ ಮತ್ತು ಪ್ರಾಧಿಕಾರ ಅನುಮೋದಿಸುವ ಎಲ್ಲಾ ಪ್ರತಿನಿಧಿಗಳು ಸೇರಿದಂತೆ ಹಮ್ಮಿಕೊಳ್ಳುವ ಕಾರ್ಯಕ್ರಮಕ್ಕೆ ತಗಲುವ ವೆಚ್ಚ. | ೩೦.೦೦ |
| ೫ | ೧. ಅ)ಸರ್ಕಾರಿ ನೌಕರರು/ರಾಜ್ಯದ ಎಲ್ಲಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಡಳಿತದಲ್ಲಿ ಕನ್ನಡ ಅನುಷ್ಠಾನ ಸಂಬಂಧ ತರಬೇತಿ/ಕನ್ನಡ ಗಣಕೀಕರಣ ತರಬೇತಿ ಮತ್ತು ವಿಚಾರ ಸಂಕಿರಣ/ಸಮಾವೇಶ/ಸಂವಾದ/ ಸಾಂಸ್ಕೃತಿಕ ಕಾರ್ಯಕ್ರಮ<br>ಆ) ಸರ್ಕಾರದ ಹಿರಿಯ ಅಧಿಕಾರಿಗಳಿಗೆ (ಐ.ಎ.ಎಸ್/ಐ.ಪಿ.ಎಸ್/ಐ.ಎಫ್.ಎಸ್) ಕನ್ನಡ ಅನುಷ್ಠಾನ ಸಂಬಂಧ ವಿಚಾರ ಸಂಕಿರಣ/ಸಂವಾದ/ಸಮಾವೇಶ<br>} ರೂ. ೧೫.೦೦ ಲಕ್ಷ<br><br>೨. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಅಭಿವೃದ್ಧಿಗಾಗಿ ಕನ್ನಡ ಜಾಗೃತಿ ಸಮಾವೇಶ/ವಿಚಾರ ಸಂಕಿರಣ/ಸಮಾವೇಶ/ಸಂವಾದ/ಸಾಂಸ್ಕೃತಿಕ ಕಾರ್ಯಕ್ರಮ ಕ್ಕಾಗಿ ವೆಚ್ಚ (ರೂ.೧೫.೦೦ಲಕ್ಷ) | ೩೦.೦೦ |

| | | |
|---|---|---|
| ೭ | ೧. ಬೆಂಗಳೂರು ನಗರದಲ್ಲಿರುವ ಕಾಲೇಜುಗಳಲ್ಲಿ ವಿಶೇಷವಾಗಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಕನ್ನಡ ನುಡಿಹಬ್ಬ ಸಮಾವೇಶ (ರೂ.೭.೦೦ ಲಕ್ಷ)<br><br>೨. ಅನ್ಯ ಭಾಷಿಕರ ಸಂಘಸಂಸ್ಥೆಗಳ ಕನ್ನಡ ಕಲಿಕಾ ಕೇಂದ್ರ ತೆರೆಯಲು ಇಚ್ಛಿಸಿದಲ್ಲಿ ಅನುದಾನ (ರೂ.೨ಲಕ್ಷ) | ೯.೦೦ |
| ೭ | ಅ) ಕನ್ನಡ ನಾಮಫಲಕ/ಕನ್ನಡ ಪ್ರಚಾರ ಫಲಕಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕಿನಲ್ಲಿ ಪ್ರತಿಷ್ಠಾಪಿಸುವುದು (ಅಗತ್ಯವಿದ್ದಲ್ಲಿ ವಾರ್ತಾ ಇಲಾಖೆ ಹಾಗೂ ಇತರೆ ಇಲಾಖೆಗಳ ಸಹಯೋಗದೊಂದಿಗೆ – ರೂ.೫೦.೦೦ ಲಕ್ಷ)<br>ಆ) ಕರಪತ್ರ, ಭಿತ್ತಿಪತ್ರ ಹಾಗೂ ಇತರೆ ಪ್ರಚಾರ ಸಾಮಗ್ರಿಗಳ ಮುದ್ರಣಾ ವೆಚ್ಚ (ರೂ.೧೦.೦೦ ಲಕ್ಷ) | ೬೦.೦೦ |
| ೮ | ದೈನಂದಿನ ಪತ್ರಿಕೆಗಳಲ್ಲಿ ಪ್ರಾಧಿಕಾರದ ಕಾರ್ಯಕ್ರಮ/ಚಟುವಟಿಕೆಗಳ ಪ್ರಕಟಣೆ ವೆಚ್ಚ | ೩೫.೦೦ |
| ೯ | ಗಡಿಯ ತಾಲ್ಲೂಕುಗಳ ಒಳ ಹಾಗೂ ಗಡಿಯ ಹೊರಭಾಗ ದಲ್ಲಿರುವ ಕನ್ನಡ ಶಾಲೆಗಳ ವಿದ್ಯಾರ್ಥಿಗಳಿಗೆ ಕನ್ನಡ ಪುಸ್ತಕ ಗಳನ್ನು ಶೇಖರಿಸಲು ಕಪಾಟುಗಳನ್ನು ಪ್ರಾಧಿಕಾರದಿಂದ ಶಾಲೆಗಳಿಗೆ ಹಂಚಿಕೆ ಮಾಡುವುದು ಹಾಗೂ ಅರ್ಹ ಶಾಲೆಗಳಿಗೆ ಪೀಠೋಪಕರಣಗಳ ವಿತರಣೆಗಾಗಿ ವೆಚ್ಚ | ೪೦.೦೦ |
| ೧೦ | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕೊಠಡಿ ನವೀಕರಣ, ಆಪ್ತ ಕಾರ್ಯದರ್ಶಿಗಳ ಹಾಗೂ ಕಾರ್ಯದರ್ಶಿಗಳ ಕಛೇರಿ ಮತ್ತು ಅಧ್ಯಕ್ಷರ ಗೃಹ ಕಛೇರಿಗೆ ಪೀಠೋಪಕರಣ ಮತ್ತು ಇತರೆ ವಸ್ತುಗಳ ಖರೀದಿ | ೧೦.೦೦ |
| ೧೧ | ಹೊರ ರಾಜ್ಯದ ಗಡಿಪ್ರದೇಶ/ಹೊರರಾಜ್ಯದ ಕೇಂದ್ರ ಸ್ಥಾನದಲ್ಲಿ ಹಿರಿಯ ಸಾಹಿತಿಗಳು/ಸ್ವಾತಂತ್ರ್ಯ/ಹೋರಾಟಗಾರರು/ಚಲನಚಿತ್ರ/ಟಿ.ವಿ/ರಂಗಭೂಮಿ ಕಲಾವಿದರು ಮಾಧ್ಯಮ ಪ್ರತಿನಿಧಿಗಳಿಗೆ ಸಮಾವೇಶಕ್ಕೆ ಭಾಗವಹಿಸುವ ಹಾಗೂ ಕಾರ್ಯಕ್ರಮಕ್ಕೆ ತಗಲುವ ವೆಚ್ಚ | ೧೦.೦೦ |
| ೧೨ | ಬೆಂಗಳೂರು ನಗರದಲ್ಲಿನ ಮೂರು ಲೋಕಸಭಾ ಕ್ಷೇತ್ರಗಳಲ್ಲಿ/ ೨೮ ಮತಕ್ಷೇತ್ರಗಳಲ್ಲಿ ಕನ್ನಡ ಜಾಗೃತಿ/ಕನ್ನಡ ಜಾಥಾ/ಕನ್ನಡ ಅಭಿವೃದ್ಧಿಗಾಗಿ ಕಾರ್ಯಕ್ರಮ/ಸಮಾವೇಶದ ವೆಚ್ಚಕ್ಕಾಗಿ. | ೫೬.೦೦ |
| ೧೩ | ಕನ್ನಡ ಕಲಾ ಪ್ರಕಾರಗಳಲ್ಲಿ ರಂಗೋತ್ಸವ, ಸಾಹಿತ್ಯೋತ್ಸವ, ನಾಟಕೋತ್ಸವ, ವಚನ/ದಾಸಸಾಹಿತ್ಯ ಮತ್ತು ಸಮಕಾಲಿನ ಸಾಹಿತ್ಯದ ಬಗ್ಗೆ ಸಂವಾದ/ಗೋಷ್ಠಿ<br><br>ಮತ್ತು<br><br>ಕನ್ನಡ ಅಭಿವೃದ್ಧಿಗಾಗಿ ದೃಶ್ಯ ಮಾಧ್ಯಮ/ಸಮೂಹ ಮಾಧ್ಯಮಗಳ ಜೊತೆ ಸಂವಾದ ಮತ್ತು ಗೋಷ್ಠಿ | ೨೫.೦೦ |
| ೧೪ | ಯೋಜನಾ ಕಾರ್ಯಕ್ರಮಗಳ ಮೇಲುಸ್ತುವಾರಿ/ ಅನಿರೀಕ್ಷಿತ ಬೇಟಿಗೆ ಮಾನ್ಯ ಅಧ್ಯಕ್ಷರ ಕಛೇರಿಯ ಹೆಚ್ಚುವರಿ ವಾಹನಕ್ಕೆ ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ/ಎರವಲು ಮೇರೆಗೆ ನೇಮಕ ಮಾಡುವ ಚಾಲಕರಿಗೆ ಸಂಭಾವನೆ<br><br>ಮತ್ತು<br><br>ಯೋಜನಾ ಕಾರ್ಯಕ್ರಮಗಳ ವೀಕ್ಷಣೆಗಾಗಿ ಅಗತ್ಯವಿದ್ದಲ್ಲಿ ಬಾಡಿಗೆ ವಾಹನದ ವೆಚ್ಚ | ೪.೦೦ |
| ೧೫ | ಇತರೆ ವೆಚ್ಚಗಳು (ಬ್ಯಾಂಕ್/ಡಿ.ಡಿ ಕಮೀಷನ್ ಮತ್ತು ಅಂಚೆ ಕಛೇರಿ) | ೧.೦೦ |
| | **ಒಟ್ಟು** | **೩.೭೫.೦೦** |

ಕಾರ್ಯದರ್ಶಿ,
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಅಧ್ಯಕ್ಷರು,
ಕನ್ನಡ ಅಭಿವೃದ್ಧಿ ಪ್ರಾಧಿಕಾರ